# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಚನ್ನರಾಯಪಟ್ಟಣ

ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ (ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4(ಸಿವಿಲ್)

**ಸಿ.ಸಿ. ನಂ. 130/2024**

ಸಿಡಬ್ಲ್ಯೂ- 2 ಪಿಡಬ್ಲ್ಯೂ-1

| | |
|---|---|
| ಹೆಸರು ಃ | **ಹರೀಶ** |
| ತಂದೆ/ಗಂಡನ ಹೆಸರು ಃ | **ನಂಜಪ್ಪ** |
| ವಯಸ್ಸು ಃ | **38 ವರ್ಷ** |
| ಉದ್ಯೋಗ ಃ | **ವ್ಯಾಪಾರ** |
| ವಾಸಸ್ಥಳ ಃ | **ಜಿನ್ನಾಪುರ** |

**ದಿ 19.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ / ಪಿರ್ಯಾದಿ ಪರಃ ಮಾನ್ಯ ಎಪಿಪಿಃ ರವರಿಂದಃ**

ಚಾಸಾ 1 ಮತ್ತು 3 ಪರಿಚಿತರು. ನನಗೆ ಮೃತ ಲೋಕೆಶರವರ ಪರಿಚಯ ಇಲ್ಲ. ಈ ಕೇಸಿಗೆ ಸಂಬಂದಪಟ್ಟಂತೆ ಅಪಘಾತ ನೋಡಿರುವುದಿಲ್ಲ. ಠಾಣೆಯಲ್ಲಿ 2 ವರ್ಷದ ಹಿಂದೆ ಸಹಿಯನ್ನು ಮಾಡಿರುತ್ತೇನೆ. ನನ್ನ ಜೊತೆ ಚಾಸಾ 3 ರವರು ಸಹಿಯನ್ನು ಮಾಡಿರುತ್ತಾರೆ ಸಹಿಯನ್ನು ಮಾಡುವಾಗ ಮಧ್ಯಾಹ್ನ 1 ರಿಂದ 2 ಗಂಟೆ ಆಗಿತ್ತು. ಈಗ ನನಗೆ ತೋರಿಸುತ್ತಿರುವ ಛಾಯಚಿತ್ರದಲ್ಲಿರುವ ವಾಹನ ಗುರುತಿಸಲು ಸಾಧ್ಯವಿಲ್ಲ, ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿಯು ಗುರುತಿಸಿರುವುದಿಲ್ಲ. ನಾನು ಸಹಿ ಮಾಡುವಾಗ ಪೋಲಿಸರು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಹಿ ಇರುವ ದಾಖಲಾತಿ ಕೃತ್ಯ ನಡೆದ ಸ್ಥಳದ ಹಾಗೂ ಅಮಾನತ್ತು ಮಹಜರ್ ಆಗಿರುತ್ತದೆ. ಅದನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿರುವ ವಿಚಾರ ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಗಣಿಸಿ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಿದೆ)

**ಪಾಟೀಸವಾಲುಃ ಮಾನ್ಯ ಎ ಪಿ ಪಿ ರವರಿಂದಃ**

ದಿಃ 04.02.2024 ರಂದು ರಾತ್ರಿ 9 ಗಂಟೆಯ ಸಮಯದಲ್ಲಿ ಆರೋಪಿ ತನ್ನ ದ್ವಿಚಕ್ರ ವಾಹನವಾದ ಕೆಎ 13 ಇ ಜೆಡ್ 3898 ಬೈಕಿನ ಹಿಂಬದಿಯಲ್ಲಿ ಮೃತ ಲೋಕೇಶ್ ರವರನ್ನು ಕೂರಿಸಿಕೊಂಡು ಜಿನ್ನಾಪುರದಿಂದ ಹೊರಟಿರುತ್ತಾರೆ ಎಂದರೆಸ ರಿಯಲ್ಲ. ಅವರು ಅಜ್ಜೇನಹಳ್ಳಿಗೆ ಬರಲು ಶ್ರವಣಬೆಳಗೊಳ ಕಿಕ್ಕೇರಿ ರಸ್ತೆ ಅಜ್ಜೇನಹಳ್ಳಿ ಪ್ರೇಮಮ್ಮ ಮಂಜೇಗೌಡರ ತಂಗಿನ ತೋಟದಲ್ಲಿ ಬರುತ್ತಿರುವಾಗ ಆರೋಪಿ ತನ್ನ ಬೈಕನ್ನು ಅತಿ ವೇಗ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದಿರುತ್ತರೆ ಎಂದರೆ ಸರಿಯಲ್ಲ. ಇದರಿಂದ ಬೈಕ್ ಸಮೇತ ಹಳ್ಳಕ್ಕೆ ಬಿದ್ದಿದ್ದು ಆದರಿಂದ ಲೋಕೇಶ್ ರವರಿಗೆ ತೀವ್ರ ಸ್ವರೂಪದ ಗಾಯ ಆಗಿದ್ದು ಆರೋಪಿಯು ಫೋನ್ ಮಾಡಿ ತಿಳಿಸಿದ ಮೇರೆಗೆ ನಾನು ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿ ಮತ್ತು ಲೋಕೇಶ್ ರವರನ್ನು ಆಟೋದಲ್ಲಿ ಶ್ರವಣಬೆಳಗೊಳ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲಿ ವೈದ್ಯರು ಲೋಕೇಶ್ ಮೃತ ಪಟ್ಟಿದ್ದಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಇದರ ಬಗ್ಗೆ ನಿಪಿ 1 ರಂತೆ ಪೋಲಿಸರು ದಿಃ 05.02.2024 ರಲ್ಲಿ ಚಾಸಾ 1 ರವರು ತೋರಿಸಿದ ಜಾಗದಲ್ಲಿ ನನ್ನ ಮತ್ತು ಚಾಸಾ 3 ರವರ ಸಮಕ್ಷಮ ಮಧ್ಯಾಹ್ನ 2.40 ರಿಂದ 3.40 ರವರೆಗೆ ನಿಪಿ 1 ರಂತೆ ಮಹಜರ್ ಕ್ರಮ ಜರುಗಿಸಿ ಅಪಘಾತ ಮಾಡಿದ ವಾಹನವನ್ನು ವಶ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಇದರ ಬಗ್ಗೆ ದಿಃ

05.04.2024 ರಂದು ಈಗ ಓದಿ ಹೇಳಿದಂತೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ 2 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ/ಆರೋಪಿಗಳ ಪರ ವಕಿಲರಿಂದಃ**

ಇರುವುದಿಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿಯಾಗಿದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಚನ್ನರಾಯಪಟ್ಟಣ